# ಕರ್ನಾಟಕ ವಿಧಾನ ಪರಿಷತ್ತು

**ಸದಸ್ಯರ ಹೆಸರು** : ಶ್ರೀ ಮಧು ಜಿ. ಮಾದೇಗೌಡ
(ಪದವೀಧರರ ಕ್ಷೇತ್ರ)

**ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ** : **864**

**ಉತ್ತರಿಸಬೇಕಾದ ದಿನಾಂಕ** : **13.12.2023**

**ಉತ್ತರಿಸಬೇಕಾದ ಸಚಿವರು** : ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಬರಗಾಲ ಇರುವ ಹಿನ್ನೆಲೆಯಲ್ಲಿ ಮೇವು ಬ್ಯಾಂಕ್ ಮತ್ತು ಗೋಶಾಲೆ ತೆರೆಯಲು ಸರ್ಕಾರ ತೆಗೆದುಕೊಂಡಿರುವ ಮುನ್ನೆಚ್ಚರಿಕೆ ಕ್ರಮಗಳೇನು; ಜಿಲ್ಲಾವಾರು ಪ್ರಾರಂಭಿಸಲು ಗುರುತಿಸಲಾಗಿರುವ ತಾತ್ಕಾಲಿಕ ಗೋಶಾಲೆ ಹಾಗೂ ಮೇವು ಬ್ಯಾಂಕ್‌ಗಳ ವಿವರ ನೀಡುವುದು; | ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳ ದಿನಾಂಕ:19-11-2023 ರ ಸಾಪ್ತಾಹಿಕ ಮೇವಿನ ವರದಿಯನ್ವಯ ಪ್ರಸ್ತುತ ರೈತರ ಬಳಿ ಅಂದಾಜು 142 ಲಕ್ಷ ಟನ್ ಮೇವು ಲಭ್ಯತೆಯಿದ್ದು, 26 ವಾರಗಳಿಗೆ ಸಾಕಾಗಬಹುದೆಂದು ಅಂದಾಜಿಸಲಾಗಿದೆ. ಆದ್ದರಿಂದ ಸದ್ಯಕ್ಕೆ ರಾಜ್ಯದಲ್ಲಿ ಜಾನುವಾರುಗಳಿಗೆ ಮೇವಿನ ಕೊರತೆ ಇರುವುದಿಲ್ಲ.<br><br>ಪ್ರಸ್ತುತ ಮೇವು ನಿಧಿ/ಜಾನುವಾರು ಶಿಬಿರಗಳನ್ನು ಆರಂಭಿಸಿರುವುದಿಲ್ಲ. ಆದಾಗ್ಯೂ ಪೂರ್ವ ಸಿದ್ಧತೆಗಳನ್ನು ಕೈಗೊಳ್ಳುವಂತೆ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ (DDMA) ರವರಿಗೆ ಸೂಚಿಸಲಾಗಿದೆ.<br><br>ಮುಂಬರುವ ದಿನಗಳಲ್ಲಿ ಯಾವುದೇ ತಾಲ್ಲೂಕಿನಲ್ಲಿ ಮೇವು ಲಭ್ಯತೆ ಕಡಿಮೆ ಇದೆ ಎಂದು ಅಂದಾಜಿಸಿದಲ್ಲಿ ಜಿಲ್ಲಾ ವಿಪತ್ತು ನಿರ್ವಹಣಾ ಸಮಿತಿಯವರು SDRF/ NDRF ಮಾರ್ಗಸೂಚಿಗಳನ್ವಯ ತಾತ್ಕಾಲಿಕ ಮೇವು ನಿಧಿ/ಜಾನುವಾರು ಶಿಬಿರಗಳನ್ನು ಪ್ರಾರಂಭಿಸಲು ಸೂಕ್ತ ಸ್ಥಳಗಳನ್ನು ಗುರುತಿಸಿ ಕ್ರಮವಹಿಸುತ್ತಾರೆ. |
| ಆ) | ಬರ ಹಿನ್ನೆಲೆಯಲ್ಲಿ ಜಾನುವಾರುಗಳಿಗೆ ಮೇವು ಪೂರೈಸಲು ಕೈಗೊಂಡಿರುವ ಕ್ರಮಗಳೇನು; ಪ್ರಸ್ತುತ, ಎಷ್ಟು ಟನ್ ಮೇವು ದಾಸ್ತಾನು ಮಾಡಲಾಗಿದೆ ಮತ್ತು ಮುಂದಿನ ಎಷ್ಟು ದಿನಗಳವರೆಗೆ ಮೇವು ಲಭ್ಯವಿದೆ; ಎಷ್ಟು ಮೇವು ಬ್ಯಾಂಕ್‌ಗಳನ್ನು ತೆರೆಯಲು ಉದ್ದೇಶಿಸಲಾಗಿದೆ; (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು) | ಪ್ರಸ್ತುತ ಸಾಲಿನಲ್ಲಿ ಬರಪರಿಸ್ಥಿತಿ ಹಿನ್ನೆಲೆಯಲ್ಲಿ ರೈತರ ಜಾನುವಾರುಗಳಿಗೆ ಮೇವು ಉತ್ಪಾದನೆ ಪ್ರೋತ್ಸಾಹಿಸಲು ರೂ.22.00 ಕೋಟಿ ಅನುದಾನದಲ್ಲಿ 8,17,426 ಸಂಖ್ಯೆ ಮೇವಿನ ಬೀಜದ ಕಿರುಪೊಟ್ಟಣಗಳನ್ನು ಖರೀದಿಸಿ, ಬರ ಘೋಷಣೆಯಾಗಿರುವ ತಾಲ್ಲೂಕುಗಳ ರೈತರಿಗೆ ಉಚಿತವಾಗಿ ವಿತರಿಸಲು ಕ್ರಮವಹಿಸಲಾಗಿದೆ.<br><br>ಕೃಷಿ ಬೆಳೆಗಳ ಉಪಉತ್ಪನ್ನಗಳನ್ನು ಪೋಲಾಗದಂತೆ ಸಂರಕ್ಷಿಸುವುದು, ಪೌಷ್ಟೀಕರಿಸುವುದು ಹಾಗೂ ಮೇವು ಕತ್ತರಿಸಿ ತಿನ್ನಿಸುವಂತೆ, ಮೇವು ಕತ್ತರಿಸುವ ಯಂತ್ರಗಳ ಬಳಕೆ ಮಾಡುವ ಬಗ್ಗೆ ರೈತರಿಗೆ ಪ್ರೋತ್ಸಾಹಿಸಲಾಗುತ್ತಿದೆ. |

| | | |
|---|---|---|
| | | ತೋಟಗಾರಿಕೆ ಬೆಳೆ ಬೆಳೆಗಳ ಮಧ್ಯೆ ಖಾಲಿ ಇರುವ ಪ್ರದೇಶಗಳಲ್ಲಿ ಮೇವು ಬೆಳೆ ಬೆಳೆದು ಮೇವು ಉತ್ಪಾದನೆ ಹೆಚ್ಚಿಸಲು ಪ್ರೋತ್ಸಾಹಿಸಲಾಗುವುದು.<br><br>ಗೋಮಾಳ, ಶಾಶ್ವತ ಹುಲ್ಲುಗಾವಲು ಇತರೆ ಸರ್ಕಾರಿ ಜಮೀನುಗಳಲ್ಲಿ ಸ್ಥಳೀಯ ಸಂಸ್ಥೆಗಳ ಸಹಯೋಗದೊಂದಿಗೆ ಮೇವು ಉತ್ಪಾದಕತೆಯನ್ನು ಹೆಚ್ಚಿಸಲು ಮತ್ತು ದೀರ್ಘಾವಧಿಯಲ್ಲಿ ಮೇವಿನ ಸುಸ್ಥಿರ ಮೂಲಗಳಾಗಿ ಉಳಿಸಿಕೊಳ್ಳಲು ಅಗತ್ಯ ಕ್ರಮಗಳನ್ನು ರೂಪಿಸಲಾಗಿದೆ.<br><br>ಮೇಲಿನ ಎಲ್ಲಾ ಕ್ರಮಗಳನ್ನು ಅನುಷ್ಠಾನಗೊಳಿಸುವ ಕುರಿತು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾಮಟ್ಟದ ಮೇವು ಅಭಿವೃದ್ಧಿ ಕಾರ್ಯಪಡೆ ಸಮಿತಿ ರಚಿಸಿ ಆದೇಶ ಹೊರಡಿಸಲಾಗಿದೆ (ಸರ್ಕಾರದ ಆದೇಶ ಸಂಖ್ಯೆ: ಇ-ಪಸಂಮೀ 52 ಪಪಾಯೋ 2023, ದಿನಾಂಕ:30-10-2023).<br><br>ದೀರ್ಘಾವಧಿಯಲ್ಲಿ ಮೇವಿನ ಉತ್ಪಾದನೆ ಹೆಚ್ಚಿಸಲು ರಾಜ್ಯದಲ್ಲಿ ಮೇವು ಬೆಳೆ ಪ್ರದೇಶವನ್ನು ವಿಸ್ತರಿಸಲು/ಹೆಚ್ಚಿಸುವ ಸಲುವಾಗಿ ಅಪರ ಮುಖ್ಯಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು ಇವರ ಅಧ್ಯಕ್ಷತೆಯಲ್ಲಿ ರಾಜ್ಯಮಟ್ಟದ ಮೇವು ಅಭಿವೃದ್ಧಿ ಕಾರ್ಯಪಡೆ ಸಮಿತಿಯನ್ನು ರಚಿಸಿ ಆದೇಶ ಹೊರಡಿಸಲಾಗಿದೆ (ಸರ್ಕಾರದ ಆದೇಶ ಸಂಖ್ಯೆ: ಇ-ಪಸಂಮೀ 52 ಪಪಾಯೋ 2023 (ಭಾಗ-1), ದಿನಾಂಕ: 27-10-2023).<br><br>ರಾಜ್ಯದಲ್ಲಿ ಬರಪರಿಸ್ಥಿತಿ ಹಿನ್ನೆಲೆಯಲ್ಲಿ ಅಂತರರಾಜ್ಯ/ ಹೊರರಾಜ್ಯ ಮೇವು ಸಾಗಾಣಿಕೆಯನ್ನು ನಿರ್ಬಂಧಿಸಿ ಆದೇಶ ಹೊರಡಿಸಲಾಗಿದೆ (ಸರ್ಕಾರದ ಆದೇಶ ಸಂಖ್ಯೆ:ಕಂಇ 497 ಟಿಎನ್‌ಆರ್ 2023, ದಿನಾಂಕ: 22-11-2023).<br><br>ಪ್ರಸ್ತುತ ರಾಜ್ಯದ ರೈತರ ಬಳಿ 142 ಲಕ್ಷ ಟನ್ ಮೇವು ಲಭ್ಯತೆ ಇದ್ದು, 26 ವಾರಗಳಿಗೆ ಸಾಕಾಗುತ್ತದೆ ಎಂದು ಅಂದಾಜಿಸಲಾಗಿದೆ.<br><br>ಪ್ರಸ್ತುತ, ಯಾವುದೇ ತಾಲ್ಲೂಕಿನಲ್ಲಿ ಮೇವಿನ ಬ್ಯಾಂಕ್‌ಗಳನ್ನು ತೆರೆದಿರುವುದಿಲ್ಲ. ಮುಂಬರುವ ದಿನಗಳಲ್ಲಿ ಮೇವಿನ ಕೊರತೆ ಉಂಟಾದಲ್ಲಿ, District Disaster Management Authority (DDMA) ರವರು ಅಗತ್ಯಕ್ಕೆ ಅನುಸಾರ ಅತೀ ಅವಶ್ಯವಿದ್ದಲ್ಲಿ ಮೇವಿನ ಬ್ಯಾಂಕ್ ತೆರೆಯಲು SDRF/NDRF ಮಾರ್ಗಸೂಚಿಗಳನ್ವಯ ಸೂಕ್ತ ತೀರ್ಮಾನ ತೆಗೆದುಕೊಳ್ಳುತ್ತಾರೆ. |

| | | |
|---|---|---|
| ಇ) | ಬರಪೀಡಿತ ತಾಲ್ಲೂಕು ಎಂದು ಘೋಷಿಸಲಾದ ತಾಲ್ಲೂಕುಗಳಲ್ಲಿ ಈಗಾಗಲೇ ಜಾನುವಾರುಗಳ ಮೇವಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಪ್ರಸ್ತುತ ರಾಜ್ಯದ ರೈತರ ಬಳಿ ಅಂದಾಜು 142 ಲಕ್ಷ ಟನ್ ಮೇವು ಲಭ್ಯತೆ ಇದ್ದು, 26 ವಾರಗಳಿಗೆ ಸಾಕಾಗುತ್ತದೆ ಎಂದು ಅಂದಾಜಿಸಲಾಗಿದೆ. ಆದ್ದರಿಂದ ಜಾನುವಾರುಗಳ ಮೇವಿಗೆ ಸದ್ಯಕ್ಕೆ ತೊಂದರೆಯಾಗಿರುವುದಿಲ್ಲ. |
| ಈ) | ಒಟ್ಟು ಎಷ್ಟು ಜಾನುವಾರುಗಳಿಗೆ ತಾತ್ಕಾಲಿಕ ಗೋಶಾಲೆಗಳಲ್ಲಿ ಆಶ್ರಯ ಕಲ್ಪಿಸಬೇಕಾಗಬಹುದೆಂದು ಅಂದಾಜಿಸಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು) | ಪ್ರತಿ ತಾತ್ಕಾಲಿಕ ಜಾನುವಾರುಗಳ ಶಿಬಿರದಲ್ಲಿ 500 ರಾಸುಗಳಿಗೆ ಆಶ್ರಯ ಕಲ್ಪಿಸಬಹುದಾಗಿದೆ. ಮೇವಿನ ಕೊರತೆ ಅನುಭವಿಸಬಹುದಾದ ಜಾನುವಾರು ಸಂಖ್ಯೆಗೆ ಅನುಗುಣವಾಗಿ **District Disaster Management** Authority (DDMA) ರವರು ಜಿಲ್ಲೆಯ ಸೂಕ್ತ ಸ್ಥಳಗಳಲ್ಲಿ ಸ್ಥಾಪಿಸಬಹುದಾದ ಜಾನುವಾರು ಶಿಬಿರ ಸಂಖ್ಯೆಗಳನ್ನು ತಿರ್ಮಾನಿಸುತ್ತಾರೆ. |
| ಉ) | ಬರಪೀಡಿತ ತಾಲ್ಲೂಕು ಎಂದು ಘೋಷಿಸಲಾದ ತಾಲ್ಲೂಕುಗಳ ಪೈಕಿ ಎಷ್ಟು ತಾಲ್ಲೂಕುಗಳು ನೀರಾವರಿ ಮತ್ತು ಅರೆ ನೀರಾವರಿ ಪ್ರದೇಶ ವ್ಯಾಪ್ತಿಗೆ ಬರುತ್ತದೆ? (ಸಂಪೂರ್ಣ ವಿವರ ನೀಡುವುದು) | ಬರಪೀಡಿತ ತಾಲ್ಲೂಕು ಎಂದು ಘೋಷಿಸಲಾದ ತಾಲ್ಲೂಕುಗಳ ಪೈಕಿ ನೀರಾವರಿ ಮತ್ತು ಅರೆ ನೀರಾವರಿ ಪ್ರದೇಶ ವ್ಯಾಪ್ತಿಗೆ ಬರುವ ತಾಲ್ಲೂಕುವಾರು ವಿವರವನ್ನು **ಅನುಬಂಧದಲ್ಲಿ** ನೀಡಲಾಗಿದೆ. |

ಇ- ಪಸಂಮೀ 258 ಸಲೆವಿ 2023

**(ಕೆ. ವೆಂಕಟೇಶ್)**
ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

ACQ - 831 (864)

| ಅನುಬಂಧ | | | | |
|---|---|---|---|---|
| ಬರಪೀಡಿತ ತಾಲ್ಲೂಕು ಎಂದು ಘೋಷಿಸಲಾದ ತಾಲ್ಲೂಕುಗಳ ಪೈಕಿ ನೀರಾವರಿ ಮತ್ತು ಅರೆ ನೀರಾವರಿ ಪ್ರದೇಶ ವಿವರ | | | | |
| ಕ್ರ. ಸಂ | ಜಿಲ್ಲೆಯ ಹೆಸರು | ಕ್ರ. ಸಂ | ನೀರವಾರಿ ಪ್ರದೇಶ ವ್ಯಾಪ್ತಿಯ ತಾಲ್ಲೂಕಿನ ಹೆಸರು | ಅರೆ ನೀರವಾರಿ ಪ್ರದೇಶ ವ್ಯಾಪ್ತಿಯ ತಾಲ್ಲೂಕಿನ ಹೆಸರು |
| 1 | ಬೆಂಗಳೂರು ಗ್ರಾಮಾಂತರ | 1 | - | ದೇವನಹಳ್ಳಿ |
| | | 2 | - | ದೊಡ್ಡಬಳ್ಳಾಪುರ |
| | | 3 | - | ಹೊಸಕೋಟೆ |
| | | 4 | - | ನೆಲಮಂಗಲ |
| 2 | ಬೆಂಗಳೂರು ನಗರ | 5 | - | ಆನೇಕಲ್ |
| | | 6 | - | ಬೆಂಗಳೂರು ಉತ್ತರ |
| | | 7 | - | ಯಲಹಂಕ |
| | | 8 | - | ಬೆಂಗಳೂರು ದಕ್ಷಿಣ |
| | | 9 | - | ಬೆಂಗಳೂರುಪೂರ್ವ |
| 3 | ಚಿತ್ರದುರ್ಗ | 10 | - | ಚಿತ್ರದುರ್ಗ |
| | | 11 | - | ಚಳ್ಳಕೆರೆ |
| | | 12 | - | ಹೊಳಲ್ಕೆರೆ |
| | | 13 | - | ಹೊಸದುರ್ಗ |
| | | 14 | ಹಿರಿಯೂರು | - |
| | | 15 | - | ಮೊಳಕಾಲ್ಮೂರು |
| 4 | ಚಿಕ್ಕಬಳ್ಳಾಪುರ | 16 | - | ಬಾಗೇಪಲ್ಲಿ |
| | | 17 | - | ಚಿಕ್ಕಬಳ್ಳಾಪುರ |
| | | 18 | - | ಚಿಂತಾಮಣಿ |
| | | 19 | - | ಗೌರಿಬಿದನೂರು |
| | | 20 | - | ಗುಡಿಬಂಡೆ |
| | | 21 | - | ಶಿಡ್ಲಘಟ್ಟ |
| 5 | ದಾವಣಗೆರೆ | 22 | ಚನ್ನಗಿರಿ | - |
| | | 23 | ದಾವಣಗೆರೆ | - |
| | | 24 | ಹರಿಹರ | - |
| | | 25 | ಹೊನ್ನಾಳಿ | - |
| | | 26 | - | ಜಗಳೂರು |
| | | 27 | - | ನ್ಯಾಮತಿ |
| 6 | ಕೋಲಾರ | 28 | - | ಕೋಲಾರ |
| | | 29 | - | ಮಾಲೂರು |
| | | 30 | - | ಮುಳಬಾಗಿಲು |
| | | 31 | - | ಬಂಗಾರಪೇಟೆ |
| | | 32 | - | ಶ್ರೀನಿವಾಸಪುರ |
| | | 33 | - | ಕೆಜಿಎಫ್ |
| 7 | ರಾಮನಗರ | 34 | - | ರಾಮನಗರ |
| | | 35 | - | ಮಾಗಡಿ |
| | | 36 | - | ಚನ್ನಪಟ್ಟಣ |
| | | 37 | - | ಕನಕಪುರ |
| | | 38 | - | ಹಾರೊಹಳ್ಳಿ |

| ಬರಪೀಡಿತ ತಾಲ್ಲೂಕು ಎಂದು ಘೋಷಿಸಲಾದ ತಾಲ್ಲೂಕುಗಳ ಪೈಕಿ ನೀರಾವರಿ ಮತ್ತು ಅರೆ ನೀರಾವರಿ ಪ್ರದೇಶ ವಿವರ | | | | |
|---|---|---|---|---|
| ಕ್ರ, ಸಂ | ಜಿಲ್ಲೆಯ ಹೆಸರು | ಕ್ರ, ಸಂ | ನೀರವಾರಿ ಪ್ರದೇಶ ವ್ಯಾಪ್ತಿಯ ತಾಲ್ಲೂಕಿನ ಹೆಸರು | ಅರೆ ನೀರವಾರಿ ಪ್ರದೇಶ ವ್ಯಾಪ್ತಿಯ ತಾಲ್ಲೂಕಿನ ಹೆಸರು |
| 8 | ಶಿವಮೊಗ್ಗ | 39 | ಶಿವಮೊಗ್ಗ | - |
| | | 40 | ಭದ್ರಾವತಿ | - |
| | | 41 | ಶಿಕಾರಿಪುರ | - |
| | | 42 | - | ಸೊರಬ |
| | | 43 | - | ಸಾಗರ |
| | | 44 | - | ಹೊಸನಗರ |
| | | 45 | - | ತೀರ್ಥಹಳ್ಳಿ |
| 9 | ತುಮಕೂರು | 46 | ತಿಪಟೂರು | - |
| | | 47 | ತುರುವೇಕೆರೆ | - |
| | | 48 | ತುಮಕೂರು | - |
| | | 49 | ಕುಣಿಗಲ್ | - |
| | | 50 | - | ಕೊರಟಗೆರೆ |
| | | 51 | - | ಚಿಕ್ಕನಾಯಕನಹಳ್ಳಿ |
| | | 52 | - | ಸಿರಾ |
| | | 53 | ಗುಬ್ಬಿ | - |
| | | 54 | - | ಮಧುಗಿರಿ |
| | | 55 | - | ಪಾವಗಡ |
| 10 | ಚಾಮರಾಜ ನಗರ | 56 | - | ಗುಂಡ್ಲುಪೇಟೆ |
| | | 57 | ಕೊಳ್ಳೇಗಾಲ | - |
| | | 58 | - | ಹನೂರು |
| | | 59 | - | ಚಾಮರಾಜನಗರ |
| | | 60 | - | ಯಳಂದೂರು |
| 11 | ಚಿಕ್ಕಮಗಳೂರು | 61 | - | ಕಡೂರು |
| | | 62 | - | ಕಳಸ |
| | | 63 | - | ಕೊಪ್ಪ |
| | | 64 | - | ನ.ರಾ.ಪುರ |
| | | 65 | - | ಶೃಂಗೇರಿ |
| | | 66 | - | ಅಜ್ಜಂಪುರ |
| | | 67 | - | ಮೂಡಿಗೆರೆ |
| | | 68 | - | ತರೀಕೆರೆ |
| 12 | ದಕ್ಷಿಣ ಕನ್ನಡ | 69 | - | ಮಂಗಳೂರು |
| | | 70 | - | ಮೊಡಬಿದ್ರೆ |
| 13 | ಹಾಸನ | 71 | ಅರಕಲಗೂಡು | - |
| | | 72 | ಬೇಲೂರು | - |
| | | 73 | ಚನ್ನರಾಯಪಟ್ಟಣ | - |
| | | 74 | ಹೊಳೆನರಸೀಪುರ | - |
| | | 75 | - | ಸಕಲೇಶಪುರ |
| | | 76 | - | ಆಲೂರು |
| | | 77 | - | ಅರಸೀಕೆರೆ |
| | | 78 | ಹಾಸನ | - |

| ಬರಪೀಡಿತ ತಾಲ್ಲೂಕು ಎಂದು ಘೋಷಿಸಲಾದ ತಾಲ್ಲೂಕುಗಳ ಪೈಕಿ ನೀರಾವರಿ ಮತ್ತು ಅರೆ ನೀರಾವರಿ ಪ್ರದೇಶ ವಿವರ | | | | |
|---|---|---|---|---|
| ಕ್ರ. ಸಂ | ಜಿಲ್ಲೆಯ ಹೆಸರು | ಕ್ರ. ಸಂ | ನೀರವಾರಿ ಪ್ರದೇಶ ವ್ಯಾಪ್ತಿಯ ತಾಲ್ಲೂಕಿನ ಹೆಸರು | ಅರೆ ನೀರವಾರಿ ಪ್ರದೇಶ ವ್ಯಾಪ್ತಿಯ ತಾಲ್ಲೂಕಿನ ಹೆಸರು |
| 14 | ಕೊಡಗು | 79 | - | ಮಡಿಕೇರಿ |
| | | 80 | - | ಕುಶಾಲನಗರ |
| | | 81 | - | ಸೋಮವಾರಪೇಟೆ |
| | | 82 | - | ವಿರಾಜಪೇಟೆ |
| | | 83 | - | ಪೊನಂಪೇಟೆ |
| 15 | ಮೈಸೂರು | 84 | - | ಮೈಸೂರು |
| | | 85 | - | ನಂಜನಗೂಡು |
| | | 86 | ಕೆ.ಆರ್.ನಗರ | - |
| | | 87 | ಸಾಲಿಗ್ರಾಮ | - |
| | | 88 | - | ಹುಣಸೂರು |
| | | 89 | - | ಪಿರಿಯಾಪಟ್ಟಣ |
| | | 90 | ತಿ.ನರಸೀಪುರ | - |
| | | 91 | - | ಹೆಚ.ಡಿ.ಕೋಟೆ |
| | | 92 | - | ಸರಗೂರು |
| 16 | ಮಂಡ್ಯ | 93 | ಮಂಡ್ಯ | - |
| | | 94 | ಮದ್ದೂರ | - |
| | | 95 | ಮಳವಳಿ | - |
| | | 96 | - | ಕೆ.ಆರ್.ಪೇಟೆ |
| | | 97 | ಎಸ್.ಆರ್.ಪಟಣ | - |
| | | 98 | ಪಾಂಡವಪುರ | - |
| | | 99 | - | ನಾಗಮಂಗಲ |
| 17 | ಉಡುಪಿ | 100 | - | ಬ್ರಹ್ಮಾವರ |
| | | 101 | - | ಕಾರ್ಕಳ |
| | | 102 | - | ಹೆಬ್ರಿ |
| 18 | ಬೆಳಗಾವಿ | 103 | ಅಥಣಿ | - |
| | | 104 | ಬೈಲಹೊಂಗಲಿ | - |
| | | 105 | ಬೆಳಗಾವಿ | - |
| | | 106 | ಚಿಕ್ಕೋಡಿ | - |
| | | 107 | ಗೋಕಾಕ | - |
| | | 108 | - | ಹುಕ್ಕೇರಿ |
| | | 109 | - | ಖಾನಾಪುರ |
| | | 110 | ಕಾಗವಾಡ | - |
| | | 111 | ಕಿತ್ತೂರ | - |
| | | 112 | ಮುಡಲಗಿ | - |
| | | 113 | ನಿಪ್ಪಾಣಿ | - |
| | | 114 | ರಾಯಭಾಗ | - |
| | | 115 | ರಾಮದುರ್ಗ | - |
| | | 116 | ಸವದತ್ತಿ | - |
| | | 117 | ಯರಗಟ್ಟಿ | - |

| ಬರಪೀಡಿತ ತಾಲ್ಲೂಕು ಎಂದು ಘೋಷಿಸಲಾದ ತಾಲ್ಲೂಕುಗಳ ಪೈಕಿ ನೀರಾವರಿ ಮತ್ತು ಅರೆ ನೀರಾವರಿ ಪ್ರದೇಶ ವಿವರ | | | | |
|---|---|---|---|---|
| ಕ್ರ. ಸಂ | ಜಿಲ್ಲೆಯ ಹೆಸರು | ಕ್ರ. ಸಂ | ನೀರಾವರಿ ಪ್ರದೇಶ ವ್ಯಾಪ್ತಿಯ ತಾಲ್ಲೂಕಿನ ಹೆಸರು | ಅರೆ ನೀರಾವರಿ ಪ್ರದೇಶ ವ್ಯಾಪ್ತಿಯ ತಾಲ್ಲೂಕಿನ ಹೆಸರು |
| 19 | ಬಾಗಲಕೋಟೆ | 118 | ಬಾಗಲಕೋಟೆ | - |
| | | 119 | - | ಬದಾಮಿ |
| | | 120 | - | ಗುಳೇದಗುಡ್ಡ |
| | | 121 | ಬೀಳಗಿ | - |
| | | 122 | - | ಹುನಗುಂದ |
| | | 123 | - | ಇಲಕಲ್ |
| | | 124 | ಮುಧೋಳ | - |
| | | 125 | ಜಮಖಂಡಿ | - |
| | | 126 | ರಬಕವಿ-ಬನಹಟ್ಟಿ | - |
| 20 | ಧಾರವಾಡ | 127 | - | ಧಾರವಾಡ |
| | | 128 | - | ಹುಬ್ಬಳಿ |
| | | 129 | - | ಹುಬ್ಬಳಿ ನಗರ |
| | | 130 | - | ಕುಂದಗೋಳ |
| | | 131 | ನವಲಗುಂದ | - |
| | | 132 | - | ಕಲಗಟಗಿ |
| | | 133 | - | ಅಳ್ನಾವರ |
| | | 134 | - | ಅಣ್ಣಿಗೇರಿ |
| 21 | ಗದಗ | 135 | - | ಗದಗ |
| | | 136 | - | ಮುಂಡರಗಿ |
| | | 137 | - | ನರಗುಂದ |
| | | 138 | - | ರೋಣ |
| | | 139 | - | ಗಜೇಂದ್ರಗಡ |
| | | 140 | - | ಶಿರಹಟಿ |
| | | 141 | - | ಲಕ್ಷ್ಮೇಶ್ವರ |
| 22 | ಹಾವೇರಿ | 142 | - | ಹಾವೇರಿ |
| | | 143 | - | ರಟ್ಟಿಹಳ್ಳಿ |
| | | 144 | - | ಹಿರೇಕೆರೂರು |
| | | 145 | - | ಸವಣೂರು |
| | | 146 | - | ರಾಣಿಬೆನ್ನೂರು |
| | | 147 | - | ಬ್ಯಾಡಗಿ |
| | | 148 | - | ಹಾನಗಲ್ |
| | | 149 | - | ಶಿಗ್ಗಾಂವ |
| 23 | ಉತ್ತರಕನ್ನಡ | 150 | - | ಅಂಕೋಲ |
| | | 151 | - | ಭಟ್ಕಳ |
| | | 152 | - | ಹಳಿಯಾಳ |
| | | 153 | - | ಜೋಯಿಡಾ(ಸೂಪ) |
| | | 154 | - | ಕಾರವಾರ |
| | | 155 | - | ಕುಮಟಾ |
| | | 156 | - | ಮುಂಡಗೋಡ |
| | | 157 | - | ಸಿರ್ಸಿ |
| | | 158 | - | ಯಲ್ಲಾಪುರ |
| | | 159 | - | ಸಿದ್ದಾಪುರ |
| | | 160 | - | ದಾಂಡೇಲಿ |

| ಬರಪೀಡಿತ ತಾಲ್ಲೂಕು ಎಂದು ಘೋಷಿಸಲಾದ ತಾಲ್ಲೂಕುಗಳ ಪೈಕಿ ನೀರಾವರಿ ಮತ್ತು ಅರೆ ನೀರಾವರಿ ಪ್ರದೇಶ ವಿವರ | | | | |
|---|---|---|---|---|
| ಕ್ರ. ಸಂ | ಜಿಲ್ಲೆಯ ಹೆಸರು | ಕ್ರ. ಸಂ | ನೀರಾವರಿ ಪ್ರದೇಶ ವ್ಯಾಪ್ತಿಯ ತಾಲ್ಲೂಕಿನ ಹೆಸರು | ಅರೆ ನೀರಾವರಿ ಪ್ರದೇಶ ವ್ಯಾಪ್ತಿಯ ತಾಲ್ಲೂಕಿನ ಹೆಸರು |
| 24 | ವಿಜಯಪುರ | 161 | - | ವಿಜಯಪುರ |
| | | 162 | - | ಬಬಲೇಶ್ವರ |
| | | 163 | - | ತಿಕೋಟ |
| | | 164 | - | ಇಂಡಿ |
| | | 165 | - | ಚಡಚಣ |
| | | 166 | - | ಮುದ್ದೆಬಿಹಾಳ |
| | | 167 | - | ತಾಳಿಕೋಟ |
| | | 168 | ಸಿಂದಗಿ | |
| | | 169 | - | ಡಿ.ಹಿಪ್ಪರಗಾ |
| | | 170 | - | ಆಲಮೇಲ್ |
| | | 171 | - | ಬಿ.ಬಾಗೆವಾಡಿ |
| | | 172 | ಕೊಲಹಾರ | - |
| | | 173 | - | ನಿಡಗುಂದಿ |
| 25 | ಬಳ್ಳಾರಿ | 174 | - | ಬಳ್ಳಾರಿ |
| | | 175 | ಕುರುಗೋಡು | - |
| | | 176 | ಸಿರುಗುಪ್ಪ | - |
| | | 177 | - | ಸಂಡೂರು |
| | | 178 | ಕಂಪ್ಲಿ | - |
| 26 | ಬೀದರ | 179 | - | ಭಾಲ್ಕಿ |
| | | 180 | ಬಸವಕಲ್ಯಾಣ | - |
| | | 181 | - | ಹುಲಸೂರ |
| | | 182 | - | ಔರಾದ |
| | | 183 | ಬೀದರ | - |
| | | 184 | ಚಿಟಗುಪ್ಪ | - |
| | | 185 | ಹುಮನಾಬಾದ | - |
| | | 186 | - | ಕಮಲನಗರ |
| 27 | ಕೊಪ್ಪಳ | 187 | - | ಕೊಪ್ಪಳ |
| | | 188 | ಗಂಗಾವತಿ | - |
| | | 189 | ಕಾರಟಗಿ | - |
| | | 190 | ಕನಕಗಿರಿ | ಕನಕಗಿರಿ |
| | | 191 | - | ಕುಷ್ಟಗಿ |
| | | 192 | - | ಯಲಬುರ್ಗಾ |
| | | 193 | - | ಕುಕನೂರು |
| 28 | ಕಲಬುರ್ಗಿ | 194 | - | ಆಳಂದ್ |
| | | 195 | - | ಅಫಜಲಪುರ |
| | | 196 | - | ಕಲಬುರ್ಗಿ |
| | | 197 | - | ಕಮಲಾಪುರ |
| | | 198 | - | ಸೇಡಂ |
| | | 199 | - | ಚಿಂಚೋಳಿ |
| | | 200 | ಯಡ್ರಾಮಿ | - |
| | | 201 | - | ಜೇವರ್ಗಿ |
| | | 202 | - | ಶಹಾಬಾದ |
| | | 203 | - | ಚಿತ್ತಾಪುರ |
| | | 204 | - | ಕಾಳಗಿ |

| ಬರಪೀಡಿತ ತಾಲ್ಲೂಕು ಎಂದು ಘೋಷಿಸಲಾದ ತಾಲ್ಲೂಕುಗಳ ಪೈಕಿ ನೀರಾವರಿ ಮತ್ತು ಅರೆ ನೀರಾವರಿ ಪ್ರದೇಶ ವಿವರ | | | | |
|---|---|---|---|---|
| ಕ್ರ, ಸಂ | ಜಿಲ್ಲೆಯ ಹೆಸರು | ಕ್ರ, ಸಂ | ನೀರವಾರಿ ಪ್ರದೇಶ ವ್ಯಾಪ್ತಿಯ ತಾಲ್ಲೂಕಿನ ಹೆಸರು | ಅರೆ ನೀರವಾರಿ ಪ್ರದೇಶ ವ್ಯಾಪ್ತಿಯ ತಾಲ್ಲೂಕಿನ ಹೆಸರು |
| 29 | ರಾಯಚೂರು | 205 | - | ದೇವದುರ್ಗ |
| | | 206 | - | ಲಿಂಗಸೂರು |
| | | 207 | ಮಾನವಿ | - |
| | | 208 | - | ಮಸ್ಕಿ |
| | | 209 | - | ರಾಯಚೂರು |
| | | 210 | ಸಿರವಾರ | - |
| | | 211 | ಸಿಂಧನೂರು | - |
| 30 | ಯಾದಗಿರಿ | 212 | - | ಯಾದಗಿರಿ |
| | | 213 | ಶಹಾಪುರ | - |
| | | 214 | ಸುರಪೂರ | - |
| | | 215 | - | ಗುರವಿಠಕಲ್ |
| | | 216 | ವಡಗೇರಾ | - |
| | | 217 | ಹುಣಸಗಿ | - |
| 31 | ವಿಜಯನಗರ | 218 | ಹೊಸಪೇಟೆ | - |
| | | 219 | - | ಹಗರಿ ಬೊಮ್ಮನಹಳ್ಳಿ |
| | | 220 | - | ಹೂವಿನ ಹಡಗಲಿ |
| | | 221 | - | ಕೂಡ್ಲಿಗಿ |
| | | 222 | - | ಕೊಟ್ಟೂರು |
| | | 223 | - | ಹರಪನಹಳ್ಳಿ |